**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್.286/2025**

ಸಾಕ್ಷಿಯನ್ನು ದಿಃ **10-04-2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ **BBL** ವಕೀಲರಿಂದಃ-

ನಾನು ಈ ದಾವೆಯಲ್ಲಿ ವಾದಿ ಬ್ಯಾಂಕಿನ ಶಾಖಾಧಿಕಾರಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.

ಪ್ರತಿವಾದಿಯರು ಗೃಹ ಸಾಲ ಕೋರಿ ಸಲ್ಲಿಸಿದ ಅರ್ಜಿಯನ್ನು ನಿಪಿ–1 ಎಂದು, ಪ್ರತಿವಾದಿಯರಿಗೆ ಮಂಜೂರು ಮಾಡಿದ ಬಗ್ಗೆ ಮಂಜೂರಾತಿ ಪತ್ರವನ್ನು ನಿಪಿ–2 ಎಂದು, ಸದರಿ ಸಾಲಕ್ಕೆ ಸಂಬಂಧಿಸಿದಂತೆ advance proposal ಅನ್ನು ನಿಪಿ–3 ಎಂದು, ನೊಂದಾಯಿತ ಮೂಲ mortgage deed ಅನ್ನು ನಿಪಿ–4 ಎಂದು, Term loan agreement ಅನ್ನು ನಿಪಿ–5 ಎಂದು, Terms and conditions letter ಅನ್ನು ನಿಪಿ–6 ಎಂದು, guarantee agreement ಅನ್ನು ನಿಪಿ–7 ಎಂದು, ಮೂರು Acknowledgment of liability ಗಳನ್ನು ನಿಪಿ–8 ರಿಂದ 10 ಎಂದು, ಎರಡು ರಿವೈವಲ್ ಲೇಟರ್ ಗಳನ್ನು ನಿಪಿ–11 ಮತ್ತು 12 ಎಂದು, ಸಾಲಗಾರರ ವಾರಸುದಾರರು ಬರೆದುಕೊಟ್ಟ ಒಂದು ರಿವೈವಲ್ ಲೆಟರ್ ಅನ್ನು ನಿಪಿ–13 ಎಂದು, ಸದರಿ ಸಾಲಕ್ಕೆ ಸಂಬಂಧಿಸಿದ account statement ಅನ್ನು ನಿಪಿ–14 ಎಂದು, ತೆರಿಗೆ ಪಾವತಿ ರಶೀದಿಯನ್ನು ನಿಪಿ–15 ಎಂದು, ಮನೆ ಕಟ್ಟಡದ ಅನುಮತಿ ಪತ್ರವನ್ನು ನಿಪಿ–16 ಎಂದು, ಡಿಮ್ಯಾಂಡ್ ರಿಜಿಸ್ಟರ್ Extract ಅನ್ನು ನಿಪಿ–17 ಎಂದು, ಖಾತಾ ಪತ್ರವನ್ನು ನಿಪಿ–18 ಎಂದು, ಕಟ್ಟಡ ನೀಲಿ ನಕಾಶೆಯನ್ನು ನಿಪಿ–19 ಎಂದು, ಮೂರು Acknowledgment of liability ಗಳನ್ನು ನಿಪಿ–20 ರಿಂದ 22 ಎಂದು ಗುರುತಿಸಲಾಯಿತು.

ಪ್ರತಿವಾದಿಯರು ಬೆಳೆ ಸಾಲ ಕೋರಿ ಸಲ್ಲಿಸಿದ ಅರ್ಜಿಯನ್ನು ನಿಪಿ–23 ಎಂದು, ಪ್ರತಿವಾದಿಯರು ಬರೆದುಕೊಟ್ಟ ಘೋಷಣಾ ಪತ್ರವನ್ನು ನಿಪಿ–24 ಎಂದು, ಅಡಮಾನ ಪತ್ರದ ಕರಾರನ್ನು ನಿಪಿ–25 ಎಂದು, ಸಾಲದ ಕರಾರನ್ನು ನಿಪಿ–26 ಎಂದು, ಒಂದು Acknowledgment of liability ಅನ್ನು ನಿಪಿ–27 ಎಂದು, ಎರಡು ರಿವೈವಲ್

ಲೆಟರ್ ಗಳನ್ನು ನಿಪಿ–28 ಮತ್ತು 29 ಎಂದು, ಸಾಲಗಾರರ ವಾರಸುದಾರರು ಬರೆದುಕೊಟ್ಟ ಒಂದು ರಿವೈವಲ್ ಲೆಟರ್ ಅನ್ನು ನಿಪಿ–30 ಎಂದು, ಸದರಿ ಸಾಲದ ಖಾತೆಗೆ ಸಂಬಂದಿಸಿದ statement ಅನ್ನು ನಿಪಿ–31 ಎಂದು, ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧಿಸಿದ ವಂಶವೃಕ್ಷವನ್ನು ನಿಪಿ–32 ಎಂದು, ಎರಡು ಕಂದಾಯ ಪಾವತಿ ರಶೀದಿಗಳನ್ನು ನಿಪಿ–33 ಮತ್ತು 34 ಎಂದು, ಒಂದು ಇ.ಸಿ ಯನ್ನು ನಿಪಿ–35 ಎಂದು, ಸರ್ವೇ ನಂಬರ್ 90ಕ್ಕೆ ಸಂಬಂಧಿಸಿದ ಎರಡು ಪಹಣಿಗಳನ್ನು ನಿಪಿ–36 ಮತ್ತು 37 ಎಂದು ಗುರುತಿಸಲಾಯಿತು.

ಪ್ರತಿವಾದಿಯರು Overdraft ಸಾಲ ಸೌಲಭ್ಯ ಕೋರಿ ಸಲ್ಲಿಸಿದ ಅರ್ಜಿಯನ್ನು ನಿಪಿ–38 ಎಂದು, ಆ ಬಗ್ಗೆ ಬರೆದುಕೊಟ್ಟ ನೋಂದಾಯಿತ simple mortgage deed ಅನು ನಿಪಿ–39 ಎಂದು, ಅಡಮಾನ ಪತ್ರದ ಕರಾರನ್ನು ನಿಪಿ–40 ಎಂದು, ಸದರಿ ಸಾಲದ ಕರಾರು ಪತ್ರವನು ನಿಪಿ–41 ಎಂದು, ಎರಡು letter of revival ಗಳನ್ನು ನಿಪಿ–42 ಮತ್ತು 43 ಎಂದು, ಸಾಲಗಾರರ ವಾರಸುದಾರರು ಬರೆದುಕೊಟ್ಟ ಒಂದು ರಿವೈವಲ್ ಲೆಟರ್ ಅನ್ನು ನಿಪಿ–44 ಎಂದು, ಸದರಿ ಸಾಲದ ಖಾತೆಗೆ ಸಂಬಂದಿಸಿದ statement ಅನ್ನು ನಿಪಿ–45 ಎಂದು, ಒಂದು ಇ.ಸಿ ಯನ್ನು ನಿಪಿ–46 ಎಂದು ಗುರುತಿಸಲಾಯಿತು.

ಪ್ರತಿವಾದಿಯರು KCC ಸಾಲ ಕೋವಿಡ್ 19 ಯೋಜನೆಯಲ್ಲಿ ಸಲ್ಲಿಸಿದ ಅರ್ಜಿಯನ್ನು ನಿಪಿ–47 ಎಂದು, ಆ ಬಗ್ಗೆ ಬರೆದುಕೊಟ್ಟ ಪ್ರೊನೋಟನ್ನು ನಿಪಿ–48 ಎಂದು, undertaking letter ಅನ್ನು ನಿಪಿ–49 ಎಂದು, ಒಂದು ರಿವೈವಲ್ ಲೆಟರ್ ಅನ್ನುನಿಪಿ–50 ಎಂದು, ಸಾಲಗಾರರ ವಾರಸುದಾರರು ಬರೆದುಕೊಟ್ಟ ಒಂದು ರಿವೈವಲ್ ಲೆಟರ್ ಅನ್ನು ನಿಪಿ–51 ಎಂದು, ಸದರಿ ಸಾಲದ ಖಾತೆಗೆ ಸಂಬಂದಿಸಿದ statement ಅನ್ನು ನಿಪಿ–52 ಎಂದು, ನಮ್ಮ ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿದ ನೋಟೀಸ್ ಕಚೇರಿ ಪ್ರತಿಯನ್ನು ನಿಪಿ–53 ಎಂದು, ಅದನ್ನು ಕಳುಹಿಸಿದ ಬಗ್ಗೆ ಎರಡು ಅಂಚೆ ರಶೀದಿಗಳನ್ನು ನಿಪಿ–54 ಮತ್ತು 55 ಎಂದು, 1ನೇ ಪ್ರತಿವಾದಿಗೆ ನೋಟೀಸ್ ಜಾರಿಯಾದ ಬಗ್ಗೆ ಅಂಚೇ ಸೀಕೃತಿ ಪತ್ರವನ್ನು ನಿಪಿ–56 ಎಂದು, 1ನೇ ಪ್ರತಿವಾದಿಯ ಪತ್ನಿಗೆ ಮೃತಪಟ್ಟಿದ್ದಾರೆ ಎಂದು ಜಾರಿಯಾಗದೇ ವಾಪಸ್ಸಾದ ಅಂಚೆ ಕವರನ್ನು ನಿಪಿ–57 ಎಂದು ಗುರುತಿಸಲಾಯಿತು. ನಿಪಿ.57 ನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರ ಒಳಗಿರುವ ನೋಟಿಸನ್ನು ನಿಪಿ.57(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು: ಪ್ರತಿವಾದಿಯರ ಪರ:**

ಪ್ರತಿವಾದಿಯರು ಏಕಪಕ್ಷಿಯರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.